## ಕರ್ನಾಟಕ ಸರ್ಕಾರದ ನಡವಳಿಗಳು

ವಿಷಯ : Grid Interactive Hybrid Solar Roof Top Power plants ಅಳವಡಿಕೆಗಾಗಿ ನಿಗದಿಪಡಿಸಲಾಗಿದ್ದ ಗುತ್ತಿಗೆ ಅವಧಿಯನ್ನು ವಿಸ್ತರಿಸುವ ಬಗ್ಗೆ.

ಓದಲಾಗಿದೆ :
1. ಅಧಿಸೂಚನೆ ಸಂ:RDPR/12/BGS/2020 ದಿನಾಂಕ:18-04-2020
2. ಅಧಿಸೂಚನೆ ಸಂ:RDPR/12/BGS/2020(2nd Stage) ದಿನಾಂಕ:20-07-2020
3. ಸಂ:KPRC/DD-4/BGS/22/2020 ದಿನಾಂಕ:22-10-2020
4. ಸಂ:KPRC/DD-4/BGS/22/2020 ದಿನಾಂಕ:22-12-2020
5. ಸರ್ಕಾರದ ಆದೇಶ ಸಂ: KPRC/DD-4/214/2021 ದಿನಾಂಕ: 07.03.2022

ಪ್ರಸ್ತಾವನೆ:

ಓದಲಾದ(1) ಮತ್ತು (2) ಗಳಲ್ಲಿ 2020-21 ಮತ್ತು 2021-22 ನೇ ಸಾಲಿಗೆ ಸಂಬಂಧಿಸಿದಂತೆ, ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆಯ ಅಧೀನದಲ್ಲಿ ಬರುವ ಇಲಾಖಾ ಕಛೇರಿಗಳು, ಜಿಲ್ಲಾ ಪಂಚಾಯತ್ ಹಾಗೂ ಜಿಲ್ಲಾ ಪಂಚಾಯತ್ ಅಧೀನದಲ್ಲಿ ಬರುವ ಕಛೇರಿಗಳು, ತಾಲ್ಲೂಕು ಪಂಚಾಯತಿ ಮತ್ತು ಗ್ರಾಮ ಪಂಚಾಯತಿಗಳ ಕಟ್ಟಡಗಳಲ್ಲಿ Grid Interactive Hybrid Solar Roof Top Power plants ಗಳನ್ನು ಅಳವಡಿಸಲು ಕೆ.ಟಿ.ಪಿ.ಪಿ ನಿಯಮಗಳನ್ವಯ ಎರಡು ಹಂತಗಳಲ್ಲಿ ಇ-ಟೆಂಡರ್ ಪ್ರಕ್ರಿಯೆಗಳನ್ನು ಪೂರ್ಣಗೊಳಿಸಿ ಟೆಂಡರ್ ನೆಗೋಷಿಯೇಷನ್ ಕಮಿಟಿ ಹಾಗೂ ಟೆಂಡರ್ ಅಂಗೀಕಾರ ಸಮಿತಿಯ ಅನುಮೋದನೆಯನ್ವಯ 05 ಅರ್ಹ ಗುತ್ತಿಗೆದಾರರನ್ನು ಆಯ್ಕೆ ಮಾಡಿ, ಓದಲಾದ(3) ರಂತೆ Letter of Acceptance(LoA) ನೀಡಲಾಗಿದ್ದು, ಓದಲಾದ(4) ರಂತೆ ಕಾರ್ಯಕ್ರಮದ ಅನುಷ್ಠಾನಕ್ಕೆ ಸಂಬಂಧಿಸಿದಂತೆ ಮಾರ್ಗಸೂಚಿಗಳನ್ನು ಹೊರಡಿಸಲಾಗಿರುತ್ತದೆ.

ಮುಂದುವರೆದು, ದಿನಾಂಕ:01.10.2021 ರಿಂದ ಅನ್ವಯಿಸುವಂತೆ ಸೋಲಾರ್ ವಿದ್ಯುತ್ ಘಟಕಗಳಿಗೆ ಸಂಬಂಧಿಸಿದ ಉಪಕರಣಗಳ ಮೇಲಿನ ಜಿ.ಎಸ್.ಟಿ ದರಗಳು ಶೇ.5 ರಿಂದ ಶೇ.12 ಕ್ಕೆ ಪರಿಷ್ಕರಣೆಯಾದ ಕಾರಣ, ಹೆಚ್ಚುವರಿ ತೆರಿಗೆ ಮೊತ್ತವನ್ನು ಸೇರಿಸಿ ಬಿಲ್ಲನ್ನು ಪಾವತಿಸುವ ನಿಟ್ಟಿನಲ್ಲಿ Grid Interactive Hybrid Solar Roof Top Power plants ಗಳ ಅಳವಡಿಕೆಗಾಗಿ ಅಂತಿಮ ದರಗಳನ್ನು ಓದಲಾದ(5) ರಂತೆ ಪರಿಷ್ಕರಿಸಿ ಆದೇಶಿಸಲಾಗಿರುತ್ತದೆ.

Grid Interactive Hybrid Solar Roof Top Power plants ಗಳ ಅಳವಡಿಕೆಯ ಗುತ್ತಿಗೆಯನ್ನು ಪಡೆದಿರುವ ಐದು ಅರ್ಹ ಗುತ್ತಿಗೆದಾರ ಸಂಸ್ಥೆಗಳ ಇತ್ತೀಚಿನ ಪ್ರಗತಿ ವರದಿಯನ್ನು ಗಮನಿಸಿದಾಗ, ರಾಜ್ಯದಲ್ಲಿ ಸ್ವಂತ ಕಟ್ಟಡಗಳನ್ನು ಹೊಂದಿರುವ ಸುಮಾರು 5500 ಗ್ರಾಮ ಪಂಚಾಯತಿಗಳ ಪೈಕಿ 800 ಗ್ರಾಮ ಪಂಚಾಯತಿಗಳಲ್ಲಿ ಮಾತ್ರ ಇದುವರೆವಿಗೂ ಸೋಲಾರ್ ರೂಫ್ ಟಾಪ್ ವಿದ್ಯುತ್ ಘಟಕಗಳನ್ನು ಅಳವಡಿಸಿರುವುದು ಕಂಡುಬಂದಿರುತ್ತದೆ. ಕೋವಿಡ್ ನ ತೀವ್ರತೆ ಹಾಗೂ ಗ್ರಾಮ ಪಂಚಾಯತಿಗಳಲ್ಲಿ ಅನುದಾನಗಳ ಕೊರತೆಯ ಕಾರಣಗಳಿಂದಾಗಿ ಸೋಲಾರ್ ರೂಫ್ ಟಾಪ್ ವಿದ್ಯುತ್ ಘಟಕಗಳ ಅಳವಡಿಕೆಯನ್ನು ನಿಗದಿತ ಕಾಲಮಿತಿಯಲ್ಲಿ ಪೂರ್ಣಗೊಳಿಸಲು ಸಾಧ್ಯವಾಗುತ್ತಿಲ್ಲವೆಂದು ತಿಳಿಸಿ ಗುತ್ತಿಗೆ ಅವಧಿಯನ್ನು ವಿಸ್ತರಿಸುವಂತೆ ಗುತ್ತಿಗೆದಾರ ಸಂಸ್ಥೆಗಳು ಸರ್ಕಾರಕ್ಕೆ ಮನವಿಗಳನ್ನು ಸಲ್ಲಿಸಿರುವುದನ್ನು ಪರಿಗಣಿಸಿ, ಯೋಜನೆಯ ಸಮರ್ಪಕ ಅನುಷ್ಠಾನದ ಹಿತದೃಷ್ಟಿಯಿಂದ, Grid Interactive Hybrid Solar Roof Top Power plants ಗಳ ಅಳವಡಿಕೆಯ ಗುತ್ತಿಗೆಯ ಅವಧಿಯನ್ನು ಮುಂದಿನ ಎರಡು ವರ್ಷಗಳಿಗೆ ವಿಸ್ತರಿಸಲು ಸರ್ಕಾರವು ತೀರ್ಮಾನಿಸಿರುತ್ತದೆ. ಪ್ರಯುಕ್ತ ಈ ಆದೇಶ:

**ಸರ್ಕಾರದ ಆದೇಶ ಸಂ: ಕೆಪಿಆರ್‌ಸಿ/ಡಿಡಿ4/30/2022**
**ಬೆಂಗಳೂರು, ದಿನಾಂಕ: 20.04.2022**

ಪ್ರಸ್ತಾವನೆಯಲ್ಲಿ ವಿವರಿಸಿರುವಂತೆ, Grid Interactive Hybrid Solar Roof Top Power plants ಗಳ ಅಳವಡಿಕೆಗೆ ಸಂಬಂಧಿಸಿದಂತೆ ಓದಲಾದ(3) ರಲ್ಲಿ ಗುತ್ತಿಗೆದಾರ ಸಂಸ್ಥೆಗಳಿಗೆ ನೀಡಲಾಗಿದ್ದ Letter of Acceptance ನಲ್ಲಿ ನಿಗದಿಪಡಿಸಿದ್ದ ಗುತ್ತಿಗೆ ಅವಧಿಯನ್ನು, ಪ್ರಸ್ತುತ ಗುತ್ತಿಗೆ ಅವಧಿಯು ಮುಕ್ತಾಯಗೊಳ್ಳಬೇಕಾಗಿದ್ದ ಕೊನೆಯ ದಿನವಾದ ದಿನಾಂಕ: 22.10.2022 ರಿಂದ ದಿನಾಂಕ: 22.10.2024 ರವರೆಗೆ ವಿಸ್ತರಿಸಲಾಗಿರುತ್ತದೆ.

Grid Interactive Hybrid Solar Roof Top Power plants ಗಳ ಅಳವಡಿಕೆಗಾಗಿ ಹೊರಡಿಸಲಾಗಿದ್ದ ಮಾರ್ಗಸೂಚಿಯಲ್ಲಿನ ಅಂಶಗಳೂ ಸೇರಿದಂತೆ, ಸೋಲಾರ್ ರೂಫ್ ಟಾಪ್ ವಿದ್ಯುತ್ ಘಟಕಗಳ ಅಳವಡಿಕೆಗೆ ಸಂಬಂಧಿಸಿದಂತೆ ಈಗಾಗಲೇ ನಿಗದಿಪಡಿಸಲಾಗಿರುವ ಮೂಲ ದರಗಳಲ್ಲಿ ಯಾವುದೇ ಬದಲಾವಣೆಗಳಿರುವುದಿಲ್ಲ. ಕೇಂದ್ರ ಸರ್ಕಾರದ ವಿತ್ತ ಇಲಾಖೆಯು ಕಾಲಕಾಲಕ್ಕೆ ಪರಿಷ್ಕರಿಸುವ ಜಿ.ಎಸ್.ಟಿ ದರಗಳಲ್ಲಿ ಏರಿಳಿತವಾಗುವ ಸಂದರ್ಭಗಳಲ್ಲಿ ಮಾತ್ರ ಆಯಾ ತೆರಿಗೆ ದರಗಳನ್ನು ಅನ್ವಯಿಸಿ ಅಂತಿಮ ದರಗಳನ್ನು ಪರಿಷ್ಕರಿಸುವ ಕುರಿತು ಸರ್ಕಾರದಿಂದ ಪ್ರತ್ಯೇಕವಾಗಿ ಆದೇಶವನ್ನು ಹೊರಡಿಸಲಾಗುವುದು ಎಂದು ತಿಳಿಸಿದೆ.

ನಿರ್ದೇಶಕರು(ಗ್ರಾ.ಮೂ.ಸೌ-2)
ಹಾಗೂ ಸರ್ಕಾರದ ಪದನಿಮಿತ್ತ ಜಂಟಿ ಕಾರ್ಯದರ್ಶಿ,
ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆ.

ಇವರಿಗೆ,

1. ರಾಜ್ಯದ ಎಲ್ಲಾ ಜಿಲ್ಲಾ ಪಂಚಾಯತ್ ಗಳ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಗಳಿಗೆ ಅಗತ್ಯ ಕ್ರಮಕ್ಕಾಗಿ
2. ರಾಜ್ಯದ ಎಲ್ಲಾ ತಾಲ್ಲೂಕು ಪಂಚಾಯತ್ ಗಳ ಕಾರ್ಯನಿರ್ವಾಹಕ ಅಧಿಕಾರಿಗಳು ಹಾಗೂ ಎಲ್ಲಾ ಗ್ರಾಮ ಪಂಚಾಯತ್ ನ ಪಂಚಾಯತಿ ಅಭಿವೃದ್ಧಿ ಅಧಿಕಾರಿಗಳಿಗೆ ಅಗತ್ಯ ಕ್ರಮಕ್ಕಾಗಿ
3. M/s Powerone Microsystems, Pvt Ltd, Bangalore ರವರಿಗೆ ಮಾಹಿತಿಗಾಗಿ
4. M/s Nuetech solar systems Pvt Ltd, Bangalore ರವರಿಗೆ ಮಾಹಿತಿಗಾಗಿ
5. M/s Greensol renewable power Pvt Ltd, Bangalore ರವರಿಗೆ ಮಾಹಿತಿಗಾಗಿ
6. M/s Sri Savitr solar Pvt Ltd, Hyderabad ರವರಿಗೆ ಮಾಹಿತಿಗಾಗಿ
7. M/s Inkel Limited, Cochin ರವರಿಗೆ ಮಾಹಿತಿಗಾಗಿ

ಪ್ರತಿಯನ್ನು ಮಾಹಿತಿಗಾಗಿ:

1. ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿಗಳು, ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆ, ಬೆಂಗಳೂರು, ಇವರ ಆಪ್ತ ಕಾರ್ಯದರ್ಶಿಗಳಿಗೆ
2. ಸರ್ಕಾರದ ಪ್ರಧಾನ ಕಾರ್ಯದರ್ಶಿಗಳು(ಪಂ.ರಾಜ್) ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆ, ಬೆಂಗಳೂರು, ಇವರ ಆಪ್ತ ಕಾರ್ಯದರ್ಶಿಗಳಿಗೆ
3. ಆಯುಕ್ತರು, ಕರ್ನಾಟಕ ಪಂಚಾಯತ್ ರಾಜ್ ಆಯುಕ್ತಾಲಯ, ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆ, ಬೆಂಗಳೂರು, ಇವರ ಆಪ್ತ ಸಹಾಯಕರಿಗೆ